ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರಿಗೆ ಆ ವಿವರಗಳನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಿವೆದ ಪ್ರಶ್ನೋತಗಳ ಪಟ್ಟಿ

ವಿಷಯ.—ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಸಂದರ್ಶನ

ಪ್ರ. ಸಂಖ್ಯೆ 101 (314) ಶ್ರೀ ಆರ್. ಎನ್. ನಾಯ್ಕ (ಭಟಕಳ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 1984ನೇ ಸಾಲಿನಲ್ಲಿ ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಸಂದರ್ಶನ ನಡೆಸಲಾಯಿತೆ ;

ಆ) ಹಾಗಿಲ್ಲದಿದ್ದಲ್ಲಿ ಸದರಿ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗಿದೆಯೆ ;

ಇ) ಹಾಗಿದ್ದಲ್ಲಿ ; ಅದಕ್ಕೆ ಕಾರಣವೇನು ; ಹಾಗೂ ಅದನ್ನು ಯಾವಾಗ ಪ್ರಕಟಿಸಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಚಿವರು).—

ಅ) ಹೌದು

ಆ) ಹೌದು

ಇ) ಉದ್ಭವಿಸುವುದಿಲ್ಲ.

ವಿಷಯ : ಬೀದರ್ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದು

ಪ್ರ. ಸಂಖ್ಯೆ 102 (303) ಶ್ರೀ ಬಸವರಾಜ ಪಾಟೀಲ (ಮುಮ್ನಾಬಾದ್).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿದೆಯೆ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು). —

ಅ) 1983-84ನೇ ಜಾಲಿನಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಉಜಲಾಂಬ ಎಂಬ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜೂರಾಗಿದೆ. 1984-85ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜೂರಾಗಿರುವುದಿಲ್ಲ.

ವಿಷಯ : ರಾಜ್ಯದಲ್ಲಿ ನಡೆದ ಕೊಲೆಗಳು.

ಪ್ರ. ಸಂಖ್ಯೆ 103 (273) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ 1980ರ ನಂತರ ನಡೆದ ಕೂಲಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳಿಗೆ ಕಾರಣಗಳೇನು. (ವಿವರವಾದ ಮಾಹಿತಿಯನ್ನು ಒದಗಿಸುವುದು) ;

ಆ) ಬೆಳಗಾವಿ ಜಿಲ್ಲೆಯಲ್ಲಿ 1980ರ ನಂತರ ಯಾವ ತಾಲ್ಲೂಕಿನಲ್ಲಿ ಹೆಚ್ಚಿಗೆ ಕೂಲಿ ನಡೆದಿರುತ್ತದೆ. ಹಾಗೂ ಕೊಲೆಗಳ ಸಂಖ್ಯೆ ಎಷ್ಟು.

ಇ) ಕೊಲೆಗಳನ್ನು ತಡೆಹಿಡಿಯುವುದರಲ್ಲಿ ಸರ್ಕಾರಿ ಯಂತ್ರನೀಯ ವಿಫಲತೆಯೇ ಏನಾದರೂ ಇದ್ದುದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಈ) ಪೊಲೀಸ್ ಇಲಾಖೆಯ ವಿಫಲತೆಯಿಂದ ಆದಂತಹ ಕೊಲೆಗಳಲ್ಲಿ ನಿಲಂಬಿತ ಮಾಡಿದ ಪೊಲೀಸ್ ಅಧಿಕಾರಿಗಳ ಸಂಖ್ಯೆ ವಿಷ್ಟು.

ಉ) ಹೆಚ್ಚಿಗೆ ಕೊಲೆ ನಡೆದಂತಹ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ನೇರವಾಗಿ ಕಾಯ್ದೆಯ ಹಾಗೂ ಆರ್ಥಿಕ ಸಹಾಯ ನೀಡಲು ಸರ್ಕಾರದ ಕಾರ್ಯಕ್ರಮವೇನು.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—

ಅ) 5,287 (1-1-80ರಿಂದ 30-6-85ರವರೆಗೆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಸೂಚಿಸಿದೆ.